


# ನನ್ನ ಪದ್ಯದಲ್ಲಿ

ನನಗೆ ಗೊತ್ತಿದೆ ನನ್ನ ಪದ್ಯದಲ್ಲಿ
ಲಯವಿಲ್ಲ ಲಾವಣ್ಯವಿಲ್ಲ ಲಾಲಿತ್ಯವಿಲ್ಲ
ನನಗೆ ಗೊತ್ತಿದೆ ನನ್ನ ಪದ್ಯದಲ್ಲಿ
ನಡೆಯಿಲ್ಲ ಭಿಡೆಯಿಲ್ಲ ಕಡೆಯಲ್ಲಿ
ಏನು ಹೇಳಿತೆಂದು ನನಗೂ ತಿಳಿಯುವುದಿಲ್ಲ

ನನಗೆ ಗೊತ್ತಿದೆ ನನ್ನ ಪದ್ಯದಲ್ಲಿ
ಪ್ರಾಸವಿಲ್ಲ ಘೋಷವಿಲ್ಲ ಉಪದೇಶವಿಲ್ಲ
ನನಗೆ ಗೊತ್ತಿದೆ ನನ್ನ ಪದ್ಯದಲ್ಲಿ
ರಾಗವಿಲ್ಲ ಓಘವಿಲ್ಲ ಪ್ರಯೋಗವಿಲ್ಲ
ಘನವಾದ ಉಪಯೋಗವೇನೂ ಇಲ್ಲ

ನನಗೆ ಗೊತ್ತಿದೆ ನನ್ನ ಪದ್ಯದಲ್ಲಿ
ಅಚ್ಚರಿಯಿಲ್ಲ ಸ್ವಚ್ಛತೆಯಿಲ್ಲ
ಛಂದಸ್ಸು ಹುಡುಕಿದರೆ
ಬಂಧ ಅರಸಿದರೆ
ಮುಂದೆ ಓದಲಾರಿರಿ ನೀವು



ನನಗೆ ಗೊತ್ತಿದೆ ನನ್ನ ಪದ್ಯದಲ್ಲಿ
ಲೋಕಕ್ಕೆ ಬೇಕಾದ್ದೇನೂ ಇಲ್ಲ

ಹಾಗೇ ಮುಂಚಾಚಿ ಬೊಗಸೆಯನ್ನು
ನನ್ನ ಪದ್ಯಗಳ ಸುರಿಯುವೆ
ನೆಟ್ಟುಬಿಡಿ ನಿಮ್ಮ ಒಡಲಾಳವನ್ನು
ಮೊಳೆತು ಮೊಗ್ಗಾಗದಿದ್ದರೆ
ಮುಖ ತೋರುವುದಿಲ್ಲ ನನ್ನಾಣೆ



**ನಂದಿನಿ ಹೆದ್ದುರ್ಗ**
ಕಲೆ: ಡಿ.ಕೆ. ರಮೇಶ್